# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1045
2. ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : 25-07-2024
4. ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ರಸ್ತೆ ಬದಿ, ಖಾಲಿ ಜಾಗಗಳನ್ನು ಗಿಡಗಳನ್ನ ರಕ್ಷಿಸಲು ಟ್ರೀ ಗಾರ್ಡ್‌ಗಳನ್ನು ಅಳವಡಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಗಿಡಗಳು ಬೆಳೆದ ನಂತರ ಟ್ರೀ ಗಾರ್ಡ್‌ಗಳನ್ನು ತೆಗೆಯಲು ಇರುವ ಕ್ರಮಗಳೇನು; ಗಿಡ ನೆಟ್ಟ ಎಷ್ಟು ವರ್ಷಗಳ ನಂತರ ಇವುಗಳನ್ನು ತೆಗೆಯಲಾಗುವುದು ಇದಕ್ಕೆ ಇರುವ ನಿಯಮಗಳೇನು; | ಬಿಬಿಎಂಪಿ ಅರಣ್ಯ ಘಟಕದ ವತಿಯಿಂದ ಕಳೆದ 2 ವರ್ಷಗಳಲ್ಲಿ (2022-23 ಹಾಗೂ 2023-24ನೇ ಸಾಲಿನಲ್ಲಿ) ಯಾವುದೇ ಕಬ್ಬಿಣದ ವೃಕ್ಷ ಕವಚಗಳನ್ನು ಅಳವಡಿಸಿರುವುದಿಲ್ಲ. ಬದಲಿಗೆ, ಬಿದಿರು ವೃಕ್ಷ ಕವಚಗಳನ್ನು ಮಾತ್ರ ಅಳವಡಿಸಲಾಗಿರುತ್ತದೆ.<br><br>ಹಳೆಯ ವೃಕ್ಷ ಕವಚಗಳನ್ನು ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ ಹಾಗೂ ವೃಕ್ಷ ಕವಚಗಳನ್ನು ತೆಗೆಯಲು ಪ್ರಸ್ತುತ ಯಾವುದೇ ನಿಯಮಗಳನ್ನು ರೂಪಿಸಿರುವುದಿಲ್ಲ. |
| ಆ) | ಗಿಡಗಳನ್ನು ನೆಟ್ಟು ಆ ಗಿಡಗಳು ಬೆಳೆದ ನಂತರವು ಕೂಡ ಕಬ್ಬಿಣದ ಟ್ರೀ ಗಾರ್ಡ್‌ಗಳನ್ನು ತೆರವು ಮಾಡದೇ ಗಿಡಗಳ ಬೆಳೆಯಲು ತೊಂದರೆಯಾಗಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇವುಗಳನ್ನು ತೆರವುಗೊಳಿಸಲು ಬಿ.ಬಿ.ಎಂ.ಪಿ ಕ್ರಮಗಳೇನು;(ಮಾಹಿತಿ ನೀಡುವುದು) | ಗಿಡಗಳ ಬೆಳವಣಿಗೆಗೆ ತೊಂದರೆಯಾಗುವ ವೃಕ್ಷ ಕವಚಗಳನ್ನು ತೆರವುಗೊಳಿಸುವಂತೆ ವಲಯ ಅರಣ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ. |
| ಇ) | ರಸ್ತೆಗಳಿಗೆ ಡಾಂಬರ್ ಹಾಕುವ ಸಂದರ್ಭಗಳಲ್ಲಿ ರಸ್ತೆ ಬದಿಗಳ ಗಿಡ ಮರಗಳನ್ನು ಸೇರಿಸಿ ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ರೀತಿ ಮಾಡದೆ ಇರಲು ಗುತ್ತಿಗೆದಾರರಿಗೆ ನೀಡಿರುವ ಸೂಚನೆಗಳೇನು; ಸೂಚನೆ ನೀಡಿದ ಮೇಲು ಈ ರೀತಿ ಗಿಡ- ಮರಗಳ ಬುಡಕ್ಕೆ ಡಾಂಬರ್ ಹಾಕುವ ಗುತ್ತಿಗೆದಾರರಿಗೆ ಕೈಗೊಂಡ ಕಠೀಣ ಕ್ರಮಗಳೇನು? (ಮಾಹಿತಿ ಒದಗಿಸುವುದು) | ರಸ್ತೆಗಳಿಗೆ ಡಾಂಬರ್ ಹಾಕುವ ಸಂದರ್ಭಗಳಲ್ಲಿ ರಸ್ತೆ ಬದಿಗಳ ಗಿಡ ಮರಗಳನ್ನು ಸೇರಿಸಿ ಹಾಕುತ್ತಿರುವುದು ಕಂಡುಬಂದಲ್ಲಿ, ಪಾಲಿಕೆಯ ಅರಣ್ಯ ಘಟಕದ ವತಿಯಿಂದ ಅದನ್ನು ತೆರವುಗೊಳಿಸಲಾಗುತ್ತಿದೆ ಹಾಗೂ ಸಂಬಂಧಪಟ್ಟ ಅಭಿಯಂತರರ ವಿಭಾಗಕ್ಕೆ ಡಾಂಬರನ್ನು ತೆರವುಗೊಳಿಸಲು ತಿಳಿಸಲಾಗಿದೆ. |

**ಸಂಖ್ಯೆ: ನಅಇ 98 ಬಿಬಿಎ 2024(ಇ)**

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ